ಓ.ಎಸ್.ನಂ.**161/2010 C/W 19/2013**
ಡಿಡಬ್ಲ್ಯೂ .**3**

ಪ್ರಮಾಣ ವಚನ ಬೋಧಿಸಿದ ದಿನಾಂಕಃ **11.09.2025.**
ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.

**ಪಾಟೀ ಸವಾಲುಃ ವಾದಿ ಪರ ಶ್ರೀ ಎ.ಎನ್.ಎಲ್. ವಕೀಲರಿಂದ**

ನನಗೆ ಕನ್ನಡ ಓದಲು ಮತ್ತು ಬರೆಯಲು ಬರುತ್ತದೆ. ನಾನು **7**ನೇ ತರಗತಿಯ ತನಕ ವಿದ್ಯಾಭ್ಯಾಸ ಮಾಡಿರುತ್ತೇನೆ. ಪ್ರಮಾಣಪತ್ರದಲ್ಲಿರುವ ವಿಷಯವನ್ನು ನಾನೇ ಹೇಳಿ ಬರೆಸಿದ್ದೇನೆ. ಸರ್ವೆ ನಂ.**26/2** ಮತ್ತು **24** ಮೂಲತಃ ಸುಬ್ಬಣ್ಣನವರಿಗೆ ಸೇರಿದ ಜಮೀನು. ಸುಬ್ಬಣ್ಣನವರ ತಂದೆಯ ಹೆಸರು ಕೆಂಪಣ್ಣ. ಕೆಂಪಣ್ಣನವರಿಗೆ ಇಬ್ಬರು ಮಕ್ಕಳು. ಅವರುಗಳೆಂದರೆ ನಾರಾಯಣಪ್ಪ ಮತ್ತು ಸುಬ್ಬಣ್ಣ. ಸರ್ವೆ ನಂ.**26/2** ರ ಆಸ್ತಿಯನ್ನು ಖರೀದಿಸುವ ಸಮಯದಲ್ಲಿ ನಾವು ಸುಬ್ಬಣ್ಣನವರ ಕಡೆಯಿಂದ ಎಂ.ಆರ್.ಪ್ರತಿ ಮತ್ತು ಪಹಣಿಯನ್ನು ಪಡೆದುಕೊಂಡಿರುತ್ತೇವೆ. ಇವೆರಡನ್ನು ಹೊರತುಪಡಿಸಿ ನಾವು ಬೇರೆ ಯಾವುದೇ ದಾಖಲೆಯನ್ನು ಪಡೆದುಕೊಂಡಿಲ್ಲ. ಸುಬ್ಬಣ್ಣನವರು ನನ್ನ ಸಂಬಂಧಿಕರಲ್ಲ. ಸರ್ವೆ ನಂ.**26/2**ನ್ನು ಹೊರತುಪಡಿಸಿ ಸುಬ್ಬಣ್ಣನವರಿಗೆ ಬೇರೆ ಯಾವ ಆಸ್ತಿಗಳು ಇವೆ ಎಂದರೆ ಗೊತ್ತಿಲ್ಲ.

ಸಿ.ಕೆ.ನಾರಾಯಣಪ್ಪನವರಿಗೆ ಸರ್ವೆ ನಂ.**24** ನ್ನು ಹೊರತುಪಡಿಸಿ ಬೇರೆ ಯಾವ ಆಸ್ತಿಗಳು ಇದ್ದವು ಎಂದರೆ ಗೊತ್ತಿಲ್ಲ. ಬೇರೆ ಆಸ್ತಿಗಳ ಚಕ್ಕುಬಂಧಿ ಮತ್ತು ವಿಸ್ತೀರ್ಣ ಗೊತ್ತಾ ಎಂದರೆ ಇಲ್ಲ. ನಾನು ಸರ್ವೆ ನಂ.**26/2** ರ ಆಸ್ತಿಯನ್ನು ದಿನಾಂಕಃ**18.01.1990** ರಲ್ಲಿ ಖರೀದಿಸಿದ್ದೇನೆ. ನಾನು ಸರ್ವೆ ನಂ.**24** ರ ಆಸ್ತಿಯನ್ನು ದಿನಾಂಕಃ**29.11.1991** ರಲ್ಲಿ ಖರೀದಿಸಿದ್ದೇನೆ. ಸದರಿ ಆಸ್ತಿಗಳನ್ನು ಖರೀದಿಸುವ ಸಮಯದಲ್ಲಿ ಅವರ ಕುಟುಂಬಕ್ಕೆ ಎಷ್ಟು ಆಸ್ತಿಗಳಿದ್ದವು ಹಾಗೂ ಯಾರ ಯಾರ ಹೆಸರಿನಲ್ಲಿ ಯಾವ ಯಾವ ಆಸ್ತಿಗಳು ಇದ್ದವು ಎಂದು ನನಗೆ ಗೊತ್ತಿಲ್ಲ.

**ಮುಂದುವರೆದ ವಾಟೀ ಸವಾಲುಃ ವಾಟೀ ಸವಾಲು ಕೋರಿಕೆಯ ಮೇರೆಗೆ ಮುಂದೂಡಲಾಯಿತು.**

(ನನ್ನ ಉಕ್ತಲೇಖಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ದೊಡ್ಡಬಳ್ಳಾಪುರ.